ನಿಮ್ಮ ಪ್ರೊಫೆಸರ್ ನಾಗಸಿದ್ದಮೂರ್ತಿಯನ್ನು ಅರೆಸ್ಟ್ ಮಾಡಿದ್ದರು. ಆಂಧ್ರದ ನಕ್ಸಲರಿಗೆ ತನ್ನ ಮನೆಯಲ್ಲಿ ಆಶ್ರಯ ಕೊಟ್ಟ ಆರೋಪ, ಆಪಾದನೆ, ಅಪರಾಧದ ಮೇರೆಗೆ ನಾಗಸಿದ್ದಮೂರ್ತಿಯನ್ನು ವಿಚಾರಣಾಧೀನ ಕೈದಿಯನ್ನಾಗಿ ಸೆಂಟ್ರಲ್ ಜೈಲಿನಲ್ಲಿ ಇರಿಸಿದ್ದರು. ಆ ವೇಳೆಯಲ್ಲಿ ಆಂಧ್ರದ ಪೊಲೀಸರು ನಾಗಸಿದ್ದಮೂರ್ತಿಯನ್ನು ವಿಚಾರಣೆಗಾಗಿ ಹೈದರಾಬಾದ್‌ಗೆ ಕರೆದೊಯ್ಯಲು ಬೆಂಗಳೂರಿಗೆ ಬಂದಿದ್ದರು. ಆಗ ಒಂದು ವೇಳೆ ಕರ್ನಾಟಕ ಸರ್ಕಾರ ಪರ್ಮಿಷನ್ ಕೊಟ್ಟು ಆಂಧ್ರ ಪೊಲೀಸರ ಜೊತೆ ಕಳಿಸಿದ್ದರೆ ನಾಗಸಿದ್ದಮೂರ್ತಿ ಫೇಕ್ ಎನ್ಕೌಂಟರ್‌ಗೆ ಬಲಿಯಾಗಿಬಿಡುತ್ತಿದ್ದ. ಆ ಸಂದರ್ಭದಲ್ಲಿ ವಿಸಿಯವರು ಒಂದು ಪ್ಲಾನ್ ಮಾಡಿದರು. ಆಂಧ್ರದ ನಕ್ಸಲ್ ಯುವಕರನ್ನು ತನಗೆ ಪರಿಚಯಿಸಿದ್ದು ಪ್ರಮೋದ್ ಶಾಸ್ತ್ರಿಯೆಂದೂ, ಅವರು ನಕ್ಸಲ್ ಚಳವಳಿಗೆ ಸೇರಿದವರೆಂಬ ಸತ್ಯ ತನಗೆ ಅರಿವಿರಲಿಲ್ಲವೆಂದು ನಾಗಸಿದ್ದಮೂರ್ತಿ ಕೋರ್ಟಿನಲ್ಲಿ ವಿಚಾರಣೆಯ ವೇಳೆಯಲ್ಲಿ ಭಗವದ್ಗೀತೆಯ ಮೇಲೆ ಪ್ರಮಾಣ ಮಾಡಿ ಹೇಳಿಬಿಟ್ಟಿದ್ದ. ಅಷ್ಟೇ, ಪೊಲೀಸರು ನಾಗಸಿದ್ದಮೂರ್ತಿಯನ್ನು ಬಿಟ್ಟು ಪ್ರಮೋದ್ ಶಾಸ್ತ್ರಿಯನ್ನು ಅರೆಸ್ಟ್ ಮಾಡಿದ್ದರು. ಪ್ರಮೋದ್ ಶಾಸ್ತ್ರಿ ಆ ವರ್ಷ ಪರೀಕ್ಷೆ ಕಟ್ಟಲಾಗಲಿಲ್ಲ. ಎಮರ್ಜೆನ್ಸಿ ಎತ್ತಂಗಡಿಯಾದ ಮೇಲೆ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಪ್ರಮೋದ್ ಶಾಸ್ತ್ರಿಯ ಬಿಡುಗಡೆಯಾಗಿತ್ತು. ನಾಗಸಿದ್ದಮೂರ್ತಿ ಜಾತಿಯ ಬಲದಿಂದಾಗಿ ಮೂರು ವರ್ಷಗಳ ಕಾಲ ಯೂನಿವರ್ಸಿಟಿಯ ವಿಸಿ ಕೂಡಾ ಆಗಿದ್ದರು. ಪ್ರಮೋದ್ ಶಾಸ್ತ್ರಿ ಎಂ.ಎ ಮುಗಿಸಿದ ನಂತರ ಪಿಯು ಕಾಲೇಜಿನಲ್ಲಿ ಲೆಕ್ಚರರ್ ಆಗಿ ಕೆಲಸಕ್ಕೆ ಸೇರಿದ್ದ. ಮದುವೆಯನ್ನೂ ಮಾಡಿಕೊಂಡಿದ್ದ. ಕೆಲಸದ ನಿಮಿತ್ತ ನಾನೂ, ಅವನು ಅನೇಕ ವರ್ಷಗಳ ಕಾಲ ಭೇಟಿಯಾಗಲು ಸಾಧ್ಯವಾಗಲಿಲ್ಲ. ಏಳೆಂಟು ವರ್ಷಗಳ ಹಿಂದೆ ಕಿಡ್ನಿ ಫೇಲ್ಯೂರ್ ಆಗಿ ಪ್ರಮೋದ್ ಶಾಸ್ತ್ರಿ ಸತ್ತ ಸುದ್ದಿ ಕೇಳಿ ತುಂಬಾ ಬೇಸರವಾಗಿತ್ತು. ಇನ್ನು ನಾಗಸಿದ್ದಮೂರ್ತಿ ಮೂರು ವರ್ಷಗಳ ಹಿಂದೆ ಕೋವಿಡ್ ಸೋಂಕಿಗೆ ಬಲಿಯಾದ. ಪ್ರಮೋದ್ ಶಾಸ್ತ್ರಿಯ ಮಗನಿಗೆ ಸರ್ಕಾರ ಶಿಕ್ಷಣ ಇಲಾಖೆಯಲ್ಲಿ ಎಫ್.ಡಿ.ಎ ಕೆಲಸ ಕೊಟ್ಟಿದೆ. ಮೂರು ವರ್ಷಗಳ ಹಿಂದೆ ಯಾವುದೋ ಕೆಲಸಕ್ಕಾಗಿ ಬೆಂಗಳೂರಿನ ಹೆಡ್ ಆಫೀಸಿಗೆ ಹೋದಾಗ ಸಿಕ್ಕಿದ್ದ. ನೋಡೋಕೆ ಥೇಟ್ ಶಾಸ್ತ್ರಿಯಂತೆಯೇ ಇದ್ದಾನೆ' ನಾನು ಹೇಳಬೇಕಾದುದನ್ನು ಸಂಕ್ಷಿಪ್ತವಾಗಿಯೇ ಹೇಳಿದ್ದೆ. ಜಿ.ವಿ. ಹೆಗಡೆ ಜನಾರ್ದನ ಬಾಳಿಗನನ್ನು ಕೂಗಿದ್ದ. ಊಟ ಬಂದಿತ್ತು. ಇಬ್ಬರೂ ಮಾತನಾಡದೆ ಊಟ ಮಾಡಿದ್ದೆವು. ರಾತ್ರಿ ಹನ್ನೊಂದು ಗಂಟೆಯಾಗಿತ್ತು. ಹೆಗಡೆಯನ್ನು ಕೆಳಗೆ ಕರೆದುಕೊಂಡು ಹೋಗಲು ನಾರಾಯಣ ಹೆಗಡೆ ಬಂದಿದ್ದ. ರೂಮಿನಿಂದ ಹೊರಗೆ ಹೋಗುವಾಗ ಬಾಗಿಲಲ್ಲಿ ನಿಂತ ಹೆಗಡೆ 'ನೋಡು ಈ ನನ್ನ ಮಗನ ಮೇಲಾಣೆ ನಾಗಸಿದ್ದಮೂರ್ತಿಗೆ ನಕ್ಸಲ್ ಹುಡುಗರನ್ನು ಪರಿಚಯಿಸಿದವನು ನಾನೇ. ಪಾಪ ಪ್ರಮೋದ್ ಶಾಸ್ತ್ರಿಯಲ್ಲ. ಪೊಲೀಸರು ಪ್ರೊಫೆಸರ್ ನಾಗಸಿದ್ದಮೂರ್ತಿಯನ್ನು ಅರೆಸ್ಟ್ ಮಾಡಿ ವಿಚಾರಣೆ ಮಾಡಿದಾಗ ನನ್ನ ಹೆಸರನ್ನೇ ಹೇಳಿದ್ದರಂತೆ. ನನ್ನನ್ನು ಹುಡುಕಿಕೊಂಡು ಪೊಲೀಸರು ಮಂಗಳೂರಿಗೆ ಬಂದಿದ್ದರಂತೆ. ಅಪ್ಪ ನನಗೆ ಗೊತ್ತಿಲ್ಲದೆ ಬೆಂಗಳೂರಿಗೆ ಬಂದು ಪೊಲೀಸ್ ಅಧಿಕಾರಿಗಳಿಗೆ ಹತ್ತು ಸಾವಿರ ಕೊಟ್ಟು ಬಂದನಂತೆ. ಅಷ್ಟೇ ಪೊಲೀಸರು ಉಪಾಯದ ಆಟ ಆಡಿದ್ದಾರೆ. ಅಪ್ಪ ಸತ್ತ ಮೂರು ದಿನಕ್ಕೆ ನಮ್ಮ ಲಾಯರ್ ನನಗೆ ಈ ವಿಷಯವನ್ನು ತಿಳಿಸಿದ್ದರು. ಸೋ, ಬೆಂಗಳೂರಿನ ಮೂರು ಸೈಟುಗಳನ್ನು ನೀನು, ಪ್ರಮೋದ್ ಶಾಸ್ತ್ರಿಯ ಮಗ ಮತ್ತೆ ನಾನು ಮೂವರೂ ಒಂದೊಂದು ಹಂಚಿಕೊಳ್ಳೋಣ. ದಟ್ಸ್ ಫೇರ್. ಜಾತಿ, ಶಿಫಾರಸ್ಸು, ಹಣ ಇವುಗಳ ಮುಂದೆ ನ್ಯಾಯ, ನೀತಿ, ಮಾನವೀಯತೆ, ಧರ್ಮ ಎಲ್ಲವೂ ತಲೆಬಾಗಿ ನಿಲ್ಲುತ್ತವೆ. ಆದರೆ, ನನ್ನ ಮಟ್ಟಿಗೆ ನಾನು ಸಾಧ್ಯವಾದಷ್ಟು ಹೇಗೆ ಬದುಕಬೇಕೆಂದುಕೊಂಡಿದ್ದೆನೋ ಹಾಗೆಯೇ ಬದುಕುತ್ತಿದ್ದೇನೆ. ನನ್ನ ಮಗ ಕೂಡ ಆ ಮಾರ್ಗವನ್ನು ಅನುಸರಿಸುತ್ತಿದ್ದಾನೆ. ಗುಡ್ ನೈಟ್...' ಎಂದು ಕೆಳಗಿಳಿದಿದ್ದ ಮಗನ ಜೊತೆ. ಹಾಸಿಗೆಯ ಮೇಲೆ ಉರುಳಿದಾಗ ಅಘನಾಶಿನಿ ಮನೆಯ ಕೆಳಗೆ ಹರಿಯುತ್ತಿದ್ದಾಳೇನೋ ಎನ್ನುವಂತೆ ನೀರಿನ ಕಲರವ. ಕ್ರಮೇಣ ಮಂಪರು ಆವರಿಸತೊಡಗಿತ್ತು. ಮಂಪರಿನ ಪ್ರವಾಹದಲ್ಲಿ ನಾನು, ಹೆಗಡೆ, ಪ್ರಮೋದ್ ಶಾಸ್ತ್ರಿ, ಪ್ರೊಫೆಸರ್ ನಾಗಸಿದ್ದಮೂರ್ತಿ, ಪೊಲೀಸರು ಎಲ್ಲರೂ ತೇಲಿ ತೇಲಿ ಮುಳುಗುತ್ತಿರುವಂತೆ; ಮುಳುಗಿ ಮುಳುಗಿ ತೇಲುತ್ತಿರುವಂತೆ... ●